

ಆಗಿಬುಡ್ಲಿ. ನಾವು ಹೊಂಟೊಯ್ತಿವಿ' ಎಂದ ಧಡಿಯ.

'ಏನು ನ್ಯಾಯ ಪಂಚಾಯ್ತಿ? ಏನು ಹೇಳ್ತಾ ಇದ್ದೀರಿ? ನಮ್ಮನೆ ಗಂಡಸರನ್ನು ಯಾಕೆ ಕರೆಸಬೇಕು?' ಅವಳಿಗೆ ಅಚ್ಚರಿಯಾದಂಗಿತ್ತು.

'ಹೂಂ, ಅಲ್ಲೇ ಪಾಯಿಂಟ್ ಇರಾದು, ಇದು ಗಂಡಸರಿಗೆ ಸಂಬಂಧ ಪಟ್ಟಿದ್ದು, ಅವರೆನ್ನೆಲ್ಲಾ ಕರ್ಸಿ ಮತ್ತ'.

ಅಷ್ಟರಲ್ಲಿ ಹೊರಗಿನಿಂದ ಪ್ರೊಫೆಸರ್ ಬಂದರು. ಹಾಲಿನ ತುಂಬಾ ಜನ ಇರೋದು ನೋಡಿ ಯಾರೋ ಕಾರ್ಯಕ್ರಮಕ್ಕೆ ಕರೆಯಲು ಬಂದಿದ್ದಾರೆ ಅಂತ ಖುಷಿಯಾಗಿ ಮನೆ ಒಳಗೆ ಕಾಲಿಡುತ್ತಿದ್ದಂತೆ, 'ಓಹೋ, ಈಯಪ್ಪಾ ಪ್ರೊಫೆಸರು, ಇವನ ಅಳಿಯ ಒಬ್ಬ ಇದಾನಂತಲ್ಲ ಅವ್ನೂ ಕರ್ಸಿ' ಎಂದು ಮತ್ತೆ ಬೊಬ್ಬಿಟ್ಟರು.

'ಏಹ್, ಯಾರಯ್ಯ ನೀನು? ನಾನು ಯಾರು ಅಂತ ಗೊತ್ತಾ? ಸ್ವಲ್ಪ ಮರ್ಯಾದೆ ಕೊಟ್ಟು ಮಾತಾಡು' ಎಂದರು ಪ್ರೊಫೆಸರ್.

'ಅದೆಲ್ಲಾ ಮರ್ಯಾದೆ ಇರೋರಿಗೆ'.

ಈ ಮಾತು ಕೇಳಿ ಪ್ರೊಫೆಸರ್ ಪಿತ್ತ ನೆತ್ತಿಗೇರಿತು. ಅವರಿಗೆ ಮಾತಾಡಲು ಆಗದಷ್ಟು ಕೋಪ ಬಂದು, ಬರಿದೆ ಬೆಬ್ಬೆಬ್ಬೆ ಅನ್ನತೊಡಗಿದರು.

ಅಷ್ಟರಲ್ಲಿ ರೂಮಿನಲ್ಲಿದ್ದ ಅಳಿಯ ಮಹಾಶಯನು ಹೊರಗೆ ಬಂದು, 'ಮಾವ, ನೀವು ಸುಮ್ನೆ ಇರಿ. ನಾನು ವಿಚಾರಿಸಿಕೋತೀನಿ' ಎನ್ನುತ್ತಿದ್ದಂತೆ, ಅವರೊಂದಿಗೆ ಬಂದಿದ್ದ ಧಡಿಯ, 'ಕೂಸೆ, ಈ ಮನೇಲಿ ಗಂಡಸರು ಇಬ್ರೆಯಾ ಇರಾದು? ಹಂಗಾರೆ ಇವ್ನಾ ಅವ್ನಾ?'